INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -6, March-April, 2022,
PageNo,29-38
Peer Reviewed Journal, Referred Journal

# ಬುದ್ಧ ಪೂರ್ವದ ಭಾರತದ ಸಾಮಾಜಿಕ ಸ್ಥಿತಿಗತಿ ಕುರಿತ ಒಂದು ಅಧ್ಯಯನ

**ಡಾ.ಬಿ.ಸುರೇಶ.**[1]

ಅಂಬೇಡ್ಕರ್ ಅವರ ಪ್ರಕಾರ; ಬುದ್ಧ ಮತ್ತು ಆತನ ಧಮ್ಮವು ಜಗತ್ತಿನ ಮಹಾನ್ ಫ್ರೆಂಚ್ ಕ್ರಾಂತಿಯ ಮಾದರಿಯಲ್ಲಯೇ ಒಂದು ಬಹುದೊಡ್ಡ ಸಮಾಜೋ- ರಾಜಕೀಯ-ಧಾರ್ಮಿಕ ಕ್ರಾಂತಿಯೇ ಆಗಿತ್ತು. ಹಾಗೆಯೇ ಅದು ಒಂದು ಧಾರ್ಮಿಕ ಕ್ರಾಂತಿಗಿಂತಲೂ ಹೆಚ್ಚಿನದಾಗಿದೆ ಎಂದು ಹೇಳಬಹುದು. ಅದು ಸಾಮಾಜಿಕ ಮತ್ತು ರಾಜಕೀಯದ ಕ್ರಾಂತಿಯಾಯಿತು. ಈ ಕ್ರಾಂತಿಯ ಗುಣವು ಎಷ್ಟು ವಿಧ್ವತ್ತಿನದಾಗಿತ್ತು ಎಂದು ಅರಿಯಲು ಸಮರ್ಥರಾಗಲು ಕ್ರಾಂತಿಯು ತನ್ನ ಅವಧಿಯನ್ನು ಪ್ರಾರಂಭಿಸುವುದಕ್ಕಿಂತ ಮೊದಲು ಸಮಾಜದ ಸ್ಥಿತಿಯು ಏನು ಇತ್ತು ಎಂದು ತಿಳಿಯುವುದು ಅವಶ್ಯವಾಗಿದೆ. ಭಾರತದಲ್ಲಿ ಪ್ರಾಚೀನ ಆಳ್ವಿಕೆಗಳ ಒಂದು ಚಿತ್ರವನ್ನು ಹೊಂದುವದು ಅವಶ್ಯವಾಗಿದೆ. ಬುದ್ಧನು ಇಂಡೋ-ಆರ್ಯನ್‌ರ ಸಮಾಜವು ಸಾಮಾಜಿಕ, ಧಾರ್ಮಿಕ ಮತ್ತು ಆತ್ಮಶಕ್ತಿಯ ಅತ್ಯಂತ ಕೆಟ್ಟ ತರಹದ ಘಟಿಂಗತನದಲ್ಲಿ ಜಾರಿದಾಗ ಜನಿಸಿದವನು.

ಇಂಡೋ-ಆರ್ಯನ್ ಸಮಾಜದ ಅನೇಕ ತರಹದ ದುಷ್ಟ ಶಕ್ತಿಗಳನ್ನು ಹೆಸರಿಸುವಾಗ ಎಲ್ಲವುಗಳಲ್ಲಿ ಜೂಜಿನ ಆಟವು ಮೊದಲು ಬರುತ್ತದೆ. ಪ್ರತಿಯೊಬ್ಬ ಇಂಡೋ-ಆರ್ಯನ್ ರಾಜನು ಅವನ ಅರಮನೆಗೆ ಹೊಂದಿದ ಒಂದು ಜೂಜಿನ ವಿಶಾಲವಾದ ಗ್ರಹವನ್ನು ಹೊಂದಿದ್ದನು. ಪ್ರತಿಯೊಬ್ಬ ಇಂಡೋ ಆರ್ಯನ್ ರಾಜನು ಆಟವಾಡಲು ಒಬ್ಬ ಚಾಂಪಿಯನ್ ಎಂದು ತನ್ನ ಕೆಲಸದಲ್ಲಿ ಒಬ್ಬ ಪ್ರವೀಣನಾದ ಜೂಜುಕೋರನನ್ನು ಹೊಂದಿದ್ದನು. ವಿರಾಟ ರಾಜನು ತನ್ನ ಸೇವೆಗಾಗಿ 'ಕಂಕ' ಎಂಬ ಒಬ್ಬ ಪ್ರವೀಣ ಜೂಜುಕಾರನನ್ನು ಹೊಂದಿದ್ದನು. ಜೂಜಿನ ಆಟವು ರಾಜರೊಂದಿಗೆ ಸಮಯ ಕಳೆಯಲು ಮಾತ್ರ ಇರಲಿಲ್ಲ. ಅವರು ದೊಡ್ಡ ಜೂಜಿನ ಹಣಗಳೊಂದಿಗೆ ಆಡುತ್ತಿದ್ದರು. ಅವರು ರಾಜ್ಯಗಳನ್ನು ಅವಲಂಬಿತರನ್ನು, ಸಂಬಂಧಿಗಳನ್ನು, ಗುಲಾಮರನ್ನು, ಸೇವಕರನ್ನು ಇತ್ಯಾದಿ ಜನರನ್ನು ಪಂಥ ಕಟ್ಟಿದ್ದರು. ರಾಜ 'ನಸ'ನು ಆಟದಲ್ಲ 'ಪಾಕ್ಕರ'ನೊಂದಿಗೆ ಎಲ್ಲವನ್ನು ಪಣವಾಗಿಟ್ಟಿದ್ದನು ಮತ್ತು ಎಲ್ಲವನ್ನೂ ಕಳೆದುಕೊಂಡನು. ಅವನು ತನ್ನನ್ನೇ ಮತ್ತು ತನ್ನ ಹೆಂಡತಿ ದಮಯಂತಿಯನ್ನು ಮಾತ್ರ ಪಣವಾಗಿ ಇಟ್ಟಿರಲ್ಲ ವಿವರಾದ ಕಥೆಯನ್ನು 'ಮಹಾಭಾರತ ಸಭಾಪರ್ವ'ದಿಂದ ಪಡೆಯಬಹುದು. 'ನಸ'ನನ್ನೂ ಮೀರಿದ ರಾಜರುಗಸು ಇದ್ದರು. ಪಾಂಡವರಲ್ಲಿ ಹಿರಿಯನಾದ ಧರ್ಮರಾಯನು ಜೂಜನ್ನು ಆಡಿ ತನಗಲ್ಲ

[1]. **ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ,ಎ.ಇ.ಎಸ್.,ನ್ಯಾಷನಲ್ ಕಾಲೇಜು, ಗೌರಿಬಿದನೂರು**

ಸಹೋದರರರನ್ನು ಮತ್ತು ತಮ್ಮೆಲ್ಲರ ಮಡದಿಯಾಗಿರುವಂತಹ ಸಾಧ್ವೀ ದ್ರೌಪದಿಯನ್ನು ಜೂಜಿನಲ್ಲಿ ಪಣವಾಗಿ ಇಟ್ಟು ಸೋತನು. ಅಸುರರ ಪೂಜಾರಿಯಾದ ಶುಕ್ರಾಚಾರ್ಯನು ಬಹಳಷ್ಟು ಕುಡಿದನು ಮತ್ತು ಅವನು ಕುಡಿದ ಸ್ಥಿತಿಯಲ್ಲಿ ತನಗೆ ಮಾತ್ರ ತಿಳದಿದ್ದ ಮತ್ತು ಅದರಿಂದ ದೇವತೆಗಳು ಸಂಹರಿಸಿದ ರಾಕ್ಷಸರನ್ನು ಪುನರ್ ಜನ್ಮ ಮಾಡುತ್ತಿದ್ದ, ಜೀವ ಕೊಡುವ ಮಂತ್ರವನ್ನು ಬೃಹಸ್ಪತಿಯ ಮಗನಾದ 'ಕಾಚ್ಚ'ನಿಗೆ ಬೋಧಿಸಿದನು.

ಇಂಡೋ ಆರ್ಯನ್ನರ ಸಮಾಜದ ಅತ್ಯುತ್ತಮವಾದ ಜನರೂ ಕೂಡ ಕುಡಿತದ ಹವ್ಯಾಸಕ್ಕೆ ಅಂಟಿದ್ದರು. ಇಂಡೋ-ಆರ್ಯನ್ ಗಣ್ಯ ಮಹಿಳೆಯರೂ ಕೂಡ ಅದರಿಂದ ಮುಕ್ತವಾಗಿರಲಿಲ್ಲ. ಮಹಿಳೆಯರು ಮದಿರೆಗೆ ಅಂಟಿಕೊಂಡಿದ್ದ ಅನೇಕ ವಿವಿಧ ಉದಾಹರಣೆಗಳು ಇದ್ದವು. ಗಣ್ಯ ಮಹಿಳೆಯರು ಮತ್ತು ಇತರೆ ವರ್ಗದ ಮಹಿಳೆಯರು ಬುದ್ಧ ಧಮ್ಮದ ಪೂರ್ವದ ಅವಧಿಯಲ್ಲಿ ಅದನ್ನು ಸೇವಿಸುತ್ತಿದರು. ಮದುವೆಯ ಸಮಾರಂಭದ ಹಿಂದಿನ ರಾತ್ರಿಯಲ್ಲಿ ವಿಧವೆಯರಾದಿಯಾಗಿ ನಾಲ್ಕು ಅಥವಾ ಎಂಟು ಜನ ಮಹಿಳೆಯರು ಆಹಾರದೊಂದಿಗೆ ದ್ರಾಕ್ಷಾರಸದ ಸೇವಿಸಿ ನಾಲ್ಕು ಸಾರಿ ನೃತ್ಯ ಮಾಡಬೇಕಾಗಿತ್ತು. ಕಮರಿಲ್ಲ ಭಟ್ಟನು ಮಹಿಳೆಯರಲ್ಲಿ ಅಂತಹ ಅಭ್ಯಾಸವನ್ನು ವಿರೋಧಿಸಿದ್ದಾನೆ.

ಪ್ರಾಚೀನ ಇಂಡೋ-ಆರ್ಯನ್ ಸಮಾಜದಲ್ಲಿ ಪುರೋಹಿತ ವೃತ್ತಿಯು ಪ್ರಾಬಲ್ಯ ಹೊಂದಿತ್ತು. ಅಂತಹ ವೃತ್ತಿಯು ಒಂದು ಪವಿತ್ರವಾದ ಕೆಲಸ ಎಂದು ತಿಳಯಲ್ಪಡುತ್ತಿತ್ತು. ಅವರು ಆಚಾರಗಳ ಮತ್ತು ಆತ್ಮಬಲಗಳ ವಿಷಯಗಳಲ್ಲಿ ಜನರ ಮಾರ್ಗದರ್ಶಿಗಳು ಆಗಬೇಕು ಎಂದು ತಿಳಯಲ್ಪಡುತ್ತಿತ್ತು ಮತ್ತು ಅವರು ಜನರಿಗೆ ಅನುಸರಿಸಲು ಜೀವನ ಮಟ್ಟಗಳನ್ನು ಸ್ಥಿರಪಡಿಸಬೇಕಾಗಿತ್ತು. ಆದರೆ ಪುರೋಹಿತರು ಐಶಾರಾಮಿಯ ಜೀವನವನ್ನು ನಡೆಸಿದರು. ಪುರೋಹಿತರು/ಉಚ್ಚವರ್ಣದವರು ನೃತ್ಯಗಳು, ಸಂತೆಯ ದೃಶ್ಯಗಳು ಮತ್ತು ಇತ್ಯಾದಿಗಳ ಪ್ರದರ್ಶನಗಳಿಗೆ ಭೇಟಿ ಮಾಡುವ ಹವ್ಯಾಸ, ಆಟಗಳು, ವಿನೋದಗಳು ಮತ್ತು ಅಲಂಕರಿಸುವ ಸಾಧನಗಳ ಉಪಯೋಗಕ್ಕೆ ಅಂಟಿದ್ದರು. ಹೋಪ್ ಕಿನ್ಸರ ಪ್ರಕಾರ ಭಗವದ್ಗೀತಾದ ಅವಧಿಯು ಕ್ರಿ.ಶ. ೨೦೦ ಮತ್ತು ಕ್ರಿ.ಶ. ೪೦೦ಗಳ ಮಧ್ಯದಲ್ಲಿ ಇದ್ದಿರಬಹುದು ಎಂದು ಅಂದಾಜಿಸಲಾಗಿದೆ. ಕೌರವ ಮತ್ತು ಪಾಂಡವರ ಮಧ್ಯದಲ್ಲಿನ ಯುದ್ಧವಾದ ಮಹಾಭಾರತವು ಅತ್ಯಂತ ಪ್ರಾಚೀನವಾದ ಘಟನೆಯಾದರೂ ವ್ಯಾಸನ ಸಂಯೋಜನೆಯು ಘಟನೆಯೊಂದಿಗೆ ಸಮಕಾಲೀನವಾಗಿದೆ ಅಥವಾ ಘಟನೆಯಷ್ಟು ಹಳೆಯದಾಗಿದೆ ಎಂದು ಅರ್ಥವಲ್ಲ. ಮಹಾಭಾರತವು ಬೇರೆ ಬೇರೆ ಸಮಯಗಳಲ್ಲಿ ಬೇರೆ-ಬೇರೆ ಆವೃತ್ತಿಗಳನ್ನು ಹೊಂದಿತ್ತು. ಅದರ ಅನಂತರ ಆವೃತ್ತಿಗಳು ಮುಂದೆ ಬಂದ ಪ್ರತಿ ತಯಾರಕರ ಕೈಗಳಲ್ಲಿ ತಯಾರಿಸಲ್ಪಟ್ಟಿರಬಹುದು ಎಂದು ಕ್ಷೇಮವಾಗಿ ಊಹಿಸಬಹುದಾದ ಸಂಭಾಷಣೆಯಲ್ಲಿ ರೂಪದಲ್ಲಿ ವಿವಿಧ ಪುನಃ ಸೃಷ್ಟಿಯ ಅಥವಾ ಅನಂತರ ಸಮಯದಲ್ಲಿ ರಚಿಸಲ್ಪಟ್ಟವು. ೨೦ನೇ ಶತಮಾನದ ಅಂತ್ಯದಲ್ಲಿಯೂ ಕೂಡ ಅಂತಹ ಪುರಾಣಗಳು, ಹಳೆಯ ಪುರಾಣಗಳಿಗಿಂತ

ಸಂಪೂರ್ಣವಾಗಿ ಬೇರೆಯಾದ ಭಾಷಾಂತರವನ್ನು ಹೊಂದಿದ ಅಧ್ಯಾಯಗಳಿಂದ ದೂರದರ್ಶನ ಪ್ರಸಾರಕ್ಕೆ ಸರಿ ಹೊಂದಿಸಲು ಪುನಃ ಸಂಯೋಜನೆ ಮಾಡಲ್ಪಟ್ಟಿವೆ.

ಈಗಾಗಲೇ ವಿವರಣೆ ನೀಡಿದಂತೆಯೇ, ಇಂಡೋ–ಆರ್ಯನ್ ಸಮಾಜವು ಕೂಡಲೇ ಮಾಡಬೇಕಾದ ಶುದ್ಧೀಕರಣದ ಅವಶ್ಯಕತೆಯ ಸ್ಥಿತಿಯಲ್ಲಿತ್ತು. ಅಂದಿನ ಪೀಡೆಗಳನ್ನು ಸರಿಪಡಿಸಲು ಇಂಡೋ–ಆರ್ಯನ್ ಸಮಾಜದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯದ ಸುಧಾರಣೆಯು ತೀವ್ರವಾದ ಅವಶ್ಯಕತೆಯು ಉಂಟಾಗಿತ್ತು. ಬುದ್ಧನು ಇಂಡೋ–ಆರ್ಯನ್ ಸಮಾಜವನ್ನು ಸುಧಾರಿಸಿದ ಮೊದಲ ಸಾಮಾಜಿಕ ಕ್ರಾಂತಿಕಾರಿ ಸುಧಾರಕನಾದನು. ಭಾರತದಲ್ಲಿ ಸಾಮಾಜಿಕ ಸುಧಾರಣೆಯ ಇತಿಹಾಸವು ಬುದ್ಧನೊಂದಿಗೆ ಪ್ರಾರಂಭವಾಯಿತು ಎಂದಿದ್ದಾರೆ ಅಂಬೇಡ್ಕರ್.

ಬುದ್ಧನು ನೇಪಾಳದ ಗಡಿಯ ಮೇಲೆ ಇರುವ ಉತ್ತರ ಭಾರತದಲ್ಲಿ ಕಪಿಲ ವಸ್ತುವಿನಲ್ಲಿ ಕ್ರಿ.ಶ.ಪೂ. 563ರಲ್ಲಿ ಜನಿಸಿದನು. ಇತಿಹಾಸಕಾರರು ಒಮ್ಮೊಮ್ಮೆ ಸಿದ್ಧಾರ್ಥನು ಇಂಡೋ ಆರ್ಯನ್ ಸಮಾಜದ ರಾಜಕುಮಾರನಾಗಿದ್ದನು ಎಂದು ಹಕ್ಕು ಸಾಧಿಸುತ್ತಾರೆ. ಆದರೆ, ಅವರ ವಾದವು ಚರಿತ್ರೆಯ ಸತ್ಯಕ್ಕೆ ವಿರೋಧವಾಗಿದೆ. ಅವನ ತಂದೆಯು ಇಂಡೋ ಆರ್ಯನ್ ಪುರೋಹಿತಶಾಹಿಗಳ ಕೈಯಲ್ಲಿ ಅಪಮಾನಕ್ಕೆ ಗುರಿಯಾದ ಒಂದು ಬುಡಕಟ್ಟಿನ ಸಮುದಾಯಕ್ಕೆ ಮುಖ್ಯಸ್ಥನಾಗಿದ್ದನು. ಅವನ ಸಮುದಾಯವು ಜಾತಿ ತಾರತಮ್ಯಗಳ ಕಾರಣದಿಂದ ನಿರಂಕುಶ ಪ್ರಭುತ್ವ ಮತ್ತು ನಿರಾಶೆಯ ನೋವನ್ನು ಅನುಭವಿಸಲು ಗುರಿಯಾಗಿತ್ತು. ಅವನ ಜೀವನವನ್ನು ಕೂಲಂಕುಶವಾಗಿ ಗಮನಿಸಿದಾಗ; ಬುದ್ಧನು ಜಾತಿಯಿಂದ ಒಬ್ಬ ಕ್ಷತ್ರಿಯನಾಗಿರಲಿಲ್ಲ. ಆದರೆ ಅವನು ಸಾಮಾಜಿಕ ಕ್ರಮದ ದಾಸ್ಯತ್ವದಿಂದ ಸ್ವಾತಂತ್ರ್ಯಕ್ಕಾಗಿ ಕಠಿಣವಾಗಿ ಹೋರಾಡುತ್ತಿದ್ದ, ಕೆಳ ಸಮುದಾಯಕ್ಕೆ ಸೇರಿದ್ದನು ಎಂದು ತೀರ್ಮಾನಿಸಬಹುದು. ಅವನು ಚಾತುರ್ವರ್ಣದ ಗುಂಪಿನವನು ಅಲ್ಲ ಎಂದು ವಾದಿಸಲು ಬೆಂಬಲಿಸುವ ಅಸಂಖ್ಯವಾದ ಐತಿಹಾಸಿಕ ಪುರಾವೆಗಳು ಸಿಗುತ್ತವೆ ಎಂದು ಅಂಬೇಡ್ಕರ್ ಅವರ ತಳಸ್ಪರ್ಶಿಯಾಗಿಯೇ ವಿವರಿಸಿರುವುದನ್ನು ಗುರುತಿಸಬಹುದು.

ಯಾವುದೇ ಒಂದು ಅನ್ಯಾಯದ ಸಾಮಾಜಿಕ ಕ್ರಮದ ಕೈಗಳಲ್ಲಿ ನೋವು ಅನುಭವಿಸದೇ ಇದ್ದ ಯಾವುದೇ ಒಬ್ಬ ಪುರುಷನು ಅಸ್ತಿತ್ವದಲ್ಲಿರುವ ಸಾಮಾಜಿಕ ಕ್ರಮದ ವಿರುದ್ಧ ಎಂದೂ ಕೂಡ ಬಂಡಾಯ ಮಾಡಿಲ್ಲ ಎಂದು ವಿಶ್ವದ ಇತಿಹಾಸಿಕ ಅಭ್ಯಾಸವು ತೋರಿಸುತ್ತದೆ. ಬುದ್ಧನು ತನ್ನ ಸಮುದಾಯವನ್ನು ಗುರಿಪಡಿಸಲಾಗಿದ್ದ ಸಾಮಾಜಿಕ ನಿರಾಶೆಯನ್ನು ಕೊನೆಗೊಳಿಸಲು ಬಂಡಾಯ ಮಾಡಿದನು. ಚರಿತ್ರೆಯಲ್ಲಿರುವ ವಾಸ್ತವಿಕ ಸತ್ಯವು ಏನೆಂದರೆ; ಐಶಾರಾಮಿಯಲ್ಲಿ, ಅನುಕೂಲತೆಗಳಲ್ಲಿ ಮತ್ತು ತೊಂದರೆಗಳು ಮತ್ತು ನೋವುಗಳಿಂದ ದೂರವಾಗಿ ಜೀವಿಸುವವರು ಬಡವರನ್ನು ಸಂತೈಸಲು ಮತ್ತು ಅವರನ್ನು ಅವರ ಗುಲಾಮಗಿರಿಯ ನೊಗದಿಂದ ಸ್ವತಂತ್ರ ಮಾಡಲು ಧೈರ್ಯ ಮಾಡಲಿಲ್ಲ ಅಥವಾ ಪ್ರಯತ್ನಿಸಲಿಲ್ಲ. ವಿಶ್ವ ಇತಿಹಾಸದಿಂದ ಈ ನಿಯಮಕ್ಕೆ ಅಥವಾ ಸಿದ್ಧಾಂತಕ್ಕೆ ಯಾವುದೇ

ವಿನಾಯತಿಯನ್ನು ಹುಡುಕಲು ಸಾಧ್ಯವಿಲ್ಲ. ಬುದ್ಧನು ಬಲವಾದ ವಿಚಾರಗಳ ಮುಖಾಂತರ ಮತ್ತು ಏಕಾಂತದ ಧ್ಯಾನದ ಮುಖಾಂತರ ವಸ್ತುಗಳಲ್ಲಿ ಒಳದೃಷ್ಟಿಯನ್ನು ಪಡೆದನು ಮತ್ತು ಅವನ ಒಳದೃಷ್ಟಿಯ ಪರಿಣಾಮವಾಗಿ ಬುದ್ಧನು ಅಪಾರವಾದಂತಹ ಜ್ಞಾನವನ್ನು ಪಡೆದನು ಮತ್ತು ತನ್ನ ಸ್ವಂತದ ಧಮ್ಮಕ್ಕೆ ಒಂದು ಸ್ವರೂಪವನ್ನು ಕೊಟ್ಟನು.

ಬುದ್ಧನು ತನ್ನ ಮೂವತ್ತೈದನೇ ವಯಸ್ಸಿನಲ್ಲಿ ಜ್ಞಾನ ದೃಷ್ಟಿಯನ್ನು ಪಡೆದನು. ಅವನ ಅಂತರದೃಷ್ಟಿಯ ಕಾರಣದಿಂದ ಅವನು ಬುದ್ಧ ಎಂದು ಕರೆಯಲ್ಪಟ್ಟನು. ಬುದ್ಧ ಎಂದರೆ ಜ್ಞಾನವನ್ನು ಪಡೆದಿರುವವನು ಎಂದು ಅರ್ಥವಾಗುತ್ತದೆ. ಎಂಬತ್ತು ವರ್ಷಗಳವರೆಗೆ ಅವನು ತನ್ನ ಧಮ್ಮವನ್ನು ಹರಡುವ ಕೆಲಸದಲ್ಲಿ ಮತ್ತು ಅರ್ಪಣೆಯಾದ ಸ್ವಯಂ ಸೇವಕರಾದ ಭಿಕ್ಕುಗಳ ಒಂದು ಕ್ರಮವನ್ನು ಸ್ಥಾಪಿಸಲು ಮತ್ತು ಅದನ್ನು ನಡೆಸಿಕೊಂಡು ಹೋಗಲು ತನ್ನ ಸಮಯವನ್ನು ಕಳೆದನು. ಬುದ್ಧನು ಅಂತರಾಳದ ಅಭಿವೃದ್ಧಿಯ ಗೂಢವಾದ ಅಂಶಗಳಲ್ಲಿ ಜೀವನದ ವ್ಯವಹಾರಗಳಲ್ಲಿ ನಿರ್ದೇಶಿಸುವ, ಶಿಸ್ತಿನ ಉಲ್ಲಂಘನೆಗಳನ್ನು ಗದರಿಸುತ್ತ, ಅವರ ಸದ್ಗುಣಗಳಲ್ಲಿ ವಿಶ್ವಾಸವನ್ನು ಸ್ಪಷ್ಟಪಡಿಸುತ್ತ, ನಿಯೋಜನೆಗಳನ್ನು ಸ್ವೀಕರಿಸುತ್ತ, ಕಲಿತವರ/ವಿದ್ವಾಂಸರ ವಿರೋಧಿಗಳೊಂದಿಗೆ ಚರ್ಚೆಗಳನ್ನು ಮುಂದುವರೆಸುತ್ತ, ದುಃಖದೊಂದಿಗೆ ಹೋರಾಡುತ್ತ ರಾಜರನ್ನು ಮತ್ತು ಸಾಧುಗಳನ್ನು, ವೈದಿಕರನ್ನು ಮತ್ತು ಕೆಳಜಾತಿಹೀನರರನ್ನು, ಶ್ರೀಮಂತರರನ್ನು ಮತ್ತು ಬಡವರನ್ನು ಭೇಟಿ ಮಾಡುತ್ತ ಹೆಚ್ಚು ಮುಂದುವರೆದವರಿಗೆ ಉಪದೇಶಗಳನ್ನು ನೀಡುತ್ತಿದ್ದನು.

ಇಂಡೋ ಆರ್ಯನ್ ಸಮಾಜವು ಅಸ್ತಿತ್ವದಲ್ಲಿದ್ದ ಒಂದು ರಾಷ್ಟ್ರದಲ್ಲಿ ಬುದ್ಧ ಧಮ್ಮದ ತೀವ್ರಗತಿಯಲ್ಲಿ ಹರಡುವಿಕೆಯ ಕಾರಣವು ತನಗೆ ಯಾವುದೇ ದೇವತ್ವವನ್ನು ಅಹಂಕಾರದಿಂದ ದ್ವೇಸದ ಭವಿಶ್ಯದ ಪರಮಸುಖದ ನಿರಾಶೆಯನ್ನು ಹೊಂದುತ್ತ, ಅಷ್ಟೊಂದು ಹೆಚ್ಚು ದೇವರಿಲ್ಲದೇ ಆದರೂ ಅಷ್ಟೊಂದು ಹೆಚ್ಚು ದೇವರಂತಹ ಯಾವುದೇ ವ್ಯಕ್ತಿಯು ಯಾವಾಗಲೂ ಜೀವಸಲಿಲ್ಲ. ಆದರೆ ಆಕಾಂಕ್ಷೆ ಇಲ್ಲದಷ್ಟು ನಿರೀಕ್ಷೆ ಇಲ್ಲದಷ್ಟು ಭಯವಿಲ್ಲದೇ ವಿಚಾರದ ನಾಯಕನಾದರೂ ಪೂಜೆಗೊಂಡ ವಿಶ್ವದ ಸಹೋದರನಾದ ಅವರು ಪುರುಷರ ಮಧ್ಯದಲ್ಲಿ ಸರಳವಾಗಿ, ಶಾಂತವಾಗಿ ತನ್ನನ್ನು ವಿರೋಧಿಸಿದ ಅವರನ್ನು ಮೆದುವಾದ ವ್ಯಂಗ್ಯದಿಂದ ಅಂಕೆಗೆ ತರುತ್ತ ಧಮ್ಮ ಸಭೆಯ ಅನಂತರದ ಧಮ್ಮ ಸಭೆಗಳಲ್ಲಿ ಎಲ್ಲರ ಸ್ನೇಹಿತನು ಪ್ರತಿಯೊಬ್ಬರ ಗುರುವು, ಮಹಾವೈಭವದ ಸಿಹಿಯೊಂದಿಗೆ ಮಾತಾಡುತ್ತ ಪುರುಶರ ಮಧ್ಯದಲ್ಲ ತಿರುಗಾಡಿದನು. ಬುದ್ಧನು ಆಗ ಅಪ್ರತ್ವದಲ್ಲಿದ್ದ ವ್ಯವಸ್ಥೆಯಿಂದ ಸಂಪೂರ್ಣವಾಗಿ ಬೇರೆಯಾದ ಹೊಸ ವಿಧಾನಗಳು ಮತ್ತು ವಿಚಾರವನ್ನು ಉಪಯೋಗಿಸಿ ಇಂಡೋ ಆರ್ಯನ್ ಸಮಾಜವನ್ನು ಪುನಃ ಸ್ಥಾಪಿಸಲು ಶ್ರಮಿಸಿದನು. ಅವನು ಹೊಸ ಮಾರ್ಗದರ್ಶನ ಕೊಟ್ಟಿದ್ದನು. **'ಬುದ್ಧ ಶ'ರಣಂ, ಧಮ್ಮಮ್ ಶರಣಂ, ಸಂಘಂ ಶರಣಂ'**. ಬುದ್ಧನ ತತ್ವಜ್ಞಾನವನ್ನು ಒಂದು ತಿರುಳಿನ ಫಲದಲ್ಲಿ ಈ ರೀತಿಯಾಗಿ ಇಡಬಹುದು. ಬಯಸುವ ಕ್ರಿಯೆಯು ಗ್ರಹಿಸುವ ಕ್ರಿಯೆಯ ಕಾರಣವಾಗಿದೆ. ಬಯಸುವ ಕ್ರಿಯೆಯು

ಕೆಲಸ ಅಭ್ಯಾಸಗಳ ಗೆಲುವಿಗೆ ಜನ್ಮವನ್ನು ಕೊಡುತ್ತದೆ. ಒಂದು ಸಮಯ ಗೆಲ್ಲುವ ಆಕಾಂಕ್ಷೆಯು ಇಲ್ಲದಿದ್ದರೆ ಆಗ ಪ್ರಬಲವಾದ ಇಚ್ಛೆಯು ಹುಟ್ಟುವದಿಲ್ಲ. ಒಂದು ಸಮಯ ಪ್ರಬಲವಾದ ಇಷ್ಟವು ಇಲ್ಲದಿದ್ದರೆ ಸಮರ್ಥನೆ ಅಥವಾ ದೃಢಸಂಕಲ್ಪವು ಏಳುವುದಿಲ್ಲ. ಒಂದು ಸಮಯ ಸಮರ್ಥನೆಯು ಇಲ್ಲದಿದ್ದರೆ ವೈಯಕ್ತಿಕ ವಸ್ತುಗಳಿಗೆ ಪ್ರೀತಿಯು ಹುಟ್ಟುವದಿಲ್ಲ. ವೈಯಕ್ತಿಕ ವಸ್ತುಗಳ ಸ್ವಾಧೀನತೆಯು ಇಲ್ಲದಿದ್ದರೆ ಹೆಚ್ಚು ವಸ್ತುಗಳ ಸ್ವಾಧೀನತೆಗೆ ಧನಲೋಭವು ಹುಟ್ಟುವುದಿಲ್ಲ. ವೈಯಕ್ತಿಕ ವಸ್ತುಗಳ ಸ್ವಾಧೀನತೆಗೆ ಪ್ರೀತಿಯು ಇಲ್ಲದಿದ್ದರೆ ಆಗ ಶಾಂತಿಯು ಇರುವದಿಲ್ಲ. ಎಲ್ಲ ಬಯಕೆಗಳನ್ನು ಅವುಗಳ ನಂತರ ಲಾಲಸಗೊಳ್ಳದೇ ಅವುಗಳನ್ನು ಹೊರಹಾಕಿ ಮತ್ತು ಅವುಗಳನ್ನು ಎಲ್ಲವನ್ನು ನಾಶ ಮಾಡಿ ತ್ಯಜಿಸಿ ಮತ್ತು ನಿರಾಕರಿಸಿ ನಾವು ದಿವ್ಯ ಜ್ಞಾನವನ್ನು ಹೊಂದಬಹುದು.

ಬುದ್ಧನ ಬೋಧನೆಯು ಭಾರತದ ಇತಿಹಾಸದಲ್ಲಿ ಯಾವುದೇ ಆಕ್ರಮಣಕಾರನು ಎಂದಿಗೂ ಭೌತಿಕವಾಗಿ ಮಾಡಲಾರದಷ್ಟು ಭೂಮಿಯನ್ನು ಶುದ್ಧಗೊಳಿಸಿತು. ಕೆಲವೇ ಪೀಳಿಗೆಗಳಲ್ಲಿ ಹೆಚ್ಚಾಗಿ ಸಂಪೂರ್ಣವಾದ ದೇಶ ಅದರಲ್ಲೂ ವಿಶೇಷವಾಗಿ ನೋವು ಅನುಭವಿಸುತ್ತಿದ್ದ ಗುಂಪುಗಳು ಮತ್ತು ವ್ಯಾಪಾರಿ ವರ್ಗಗಳು ಬುದ್ಧ ಧಮ್ಮದ ಕಡೆಗೆ ನಡೆದವು. ಅದು ಬಹುಬೇಗ ಭಾರತದ ಧರ್ಮವಾಯಿತು. ಧಮ್ಮವು ಆತ್ಮಬಲದ ತಿಳುವಳಿಕೆಯಲ್ಲಿ ಇರಲಿಲ್ಲ. ಅದು ಕೇವಲ ಅಹಿಂಸೆಯ ಮಾರ್ಗವನ್ನು ಎತ್ತಿ ಹಿಡಿಯುವ ಒಂದು ಸದ್ಗುಣದ, ಶುದ್ಧವಾದ ಮತ್ತು ಮೌಲ್ಯಭರಿತ ಜೀವನದ ಮಾರ್ಗವಾಗಿತ್ತು. ಅದು ಭಾರತ ಒಂದಕ್ಕೇ ಸೀಮಿತವಾಗಿ ಉಳಿಯಲಿಲ್ಲ. ಅದು ಅಂದು ತಿಳಿದ ವಿಶ್ವದ ಪ್ರತಿಯೊಂದು ಮೂಲೆಯನ್ನು ತಲುಪಿತು. ಅದು ಇಂಡೋ ಆರ್ಯನ್ನರ ತತ್ವಶಾಸ್ತ್ರ ಮತ್ತು ನೀತಿ ನಿಯಮಗಳನ್ನು ಮೀರಿ ಬೆಳೆದು ಒಂದು ಧಾರ್ಮಿಕ ಕ್ರಾಂತಿಯಂತೆ ಪ್ರಾರಂಭವಾದರೂ ಅದಕ್ಕಿಂತ ಹೆಚ್ಚಿನದಾಗಿತ್ತು. ಅದು ಒಂದು ಸಾಮಾಜಿಕ ಮತ್ತು ಅದರೊಂದಿಗೆ ಒಂದು ರಾಜಕೀಯದ ಕ್ರಾಂತಿಯ ಸ್ವರೂಪ ಪಡೆದುಕೊಂಡಿತು. ಅದು ಜಾತೀಯತೆ ಮತ್ತು ಶೋಷಣೆಗಳಿಗೆ ಒಂದು ಪರಿಹಾರವಾಯಿತು.

ಬುದ್ಧಧಮ್ಮವು ಬಹುಮುಖ್ಯವಾಗಿಯೇ ಕೊಲ್ಲಬಾರದು, ಕದಿಯಬಾರದು, ಸುಳ್ಳು ಹೇಳಬಾರದು, ಅಪವಿತ್ರವಾಗಿ ಇರಬಾರದು ಮತ್ತು ಮಧ್ಯಪಾನ ಮಾಡಬಾರದು ಎಂಬ ಒಂದು ಹೊಸ ನೀತಿಯ ನಡುವಳಿಕೆಯನ್ನು ಹರಡಿತು. ಅದು ಬೋಧಿಸಿದಂತಹ ನೀತಿಯ ಜೀವನವು ಇಂಡೋ – ಆರ್ಯನ್ ಸಮಾಜಕ್ಕೆ ಬಹಳ ಉಪಯುಕ್ತವಾಯಿತು. ಅದು ವೇದಗಳ ಅಧಿಕಾರವನ್ನು ತಿರಸ್ಕರಿಸಿತು ಮತ್ತು ಯಜ್ಞಗಳಲ್ಲಿ ಪ್ರಾಣಿ ಬಲಿದಾನಗಳ ಆಚರಣೆಯನ್ನು ಕಿತ್ತು ಎಸೆಯಿತು. ಅದರ ಆಚರಣೆಗಳು ಪುರೋಹಿತಶಾಹಿತ್ವದ ಆಚರಣೆಗಳಿಗೆ ವಿರೋಧವಾಗಿದ್ದವು. ಅದು ಶ್ರೇಣೀಕೃತಗೊಂಡು ಅಸಮಾನತೆಯನ್ನು ತಳ್ಳಿಹಾಕಿತು ಮತ್ತು ಎಲ್ಲ ಜನರನ್ನು ಸಮಾನತೆಯ ಕಡೆಗೆ ತೆಗೆದುಕೊಂಡು ಹೋಯಿತು ಮತ್ತು ಎಲ್ಲರಿಗೂ ಅವಕಾಶದ ಸಮಾನತೆಯನ್ನು ಒದಗಿಸಿತು. ಬುದ್ಧಧಮ್ಮವು ಎಲ್ಲ

ವಿಚಾರಗಳಲ್ಲಿ ಪುರೋಹಿತಶಾಹಿತ್ವದ ವಿರೋಧಿಯಾಗಿತ್ತು. ಅಂದರೆ ಬುದ್ಧಧಮ್ಮವು ವೈದಿಕ ಧರ್ಮದ ಋಣವಾದ ತಿಳುವಳಿಕೆಯಾಗಿತ್ತು.

ಚಂದ್ರಗುಪ್ತನ ಮಗನಾದ ಬಿಂದುಸಾರನು ಕ್ರಿ.ಶ.ಪೂ. 298ರಲ್ಲಿ ಮೌರ್ಯ ಸಾಮ್ರಾಜ್ಯದ ಸಿಂಹಾಸನವನ್ನು ವಹಿಸಿಕೊಂಡನು. ಅವನ ಮಗನಾದ ಅಶೋಕನು ಸಿಂಹಾಸನವನ್ನು ಕ್ರಿ.ಶ.ಪೂ. 273ರಲ್ಲಿ ಏರಿದನು. ಅವನ ಆಳ್ವಿಕೆಯ ವಿವರಗಳು ಇಲ್ಲಿಯವರೆಗೆ ಬಿಡಿಸಿ ಓದಿದ ಭಾರತದ ಶಾಸನಗಳಲ್ಲಿ ಅತ್ಯಂತ ಹಳೆದಾದ ಅಶೋಕ ಸ್ತಂಭಗಳ ರಾಜಾಜ್ಞೆಯ ಶಿಲಾಲೇಖನಗಳಲ್ಲಿ ಸಿಗುತ್ತವೆ. ಅವನು ಬುದ್ಧನ ನಿಷ್ಠನಾದ ಅನುಯಾಯಿಯಾಗಿದ್ದನು ಮತ್ತು ಕಳಿಂಗ ಯುದ್ಧದ ಅನಂತರ ಭಾರತದಲ್ಲಿ ಮತ್ತು ವಿದೇಶದಲ್ಲಿ ಬುದ್ಧಧಮ್ಮದ ಪ್ರಸಾರಕ್ಕಾಗಿ ತನ್ನ ಸಂಪೂರ್ಣವಾದ ಜೀವನವನ್ನು ಮುಡಿಪಾಗಿಟ್ಟನು. ಅಶೋಕನು ಬುದ್ಧಧಮ್ಮವನ್ನು ತನ್ನ ಆಡಳಿತದ ರಾಜ್ಯದ ಧಮ್ಮವೆಂದು ಸಾರಿದನು. ಇದು ನಿಜವಾಗಿಯೂ ಪುರೋಹಿತಶಾಹಿಗೆ ಒಂದು ಬಲವಾದ ಹೊಡೆತವಾಯಿತು. ಅಶೋಕನ ಸಾಮ್ರಾಜ್ಯದಲ್ಲಿ ಬ್ರಾಹ್ಮಣೀಯತೆಯು ರಾಜ್ಯದ ಎಲ್ಲ ಆಶ್ರಯವನ್ನು ಕಳೆದುಕೊಂಡಿತು ಮತ್ತು ಅವರು ಎರಡನೆ ದರ್ಜೆಗೆ ಮತ್ತು ಆಧೀನದ ಸ್ಥಾನಗಳಗೆ ನೂಕಲ್ಪಟ್ಟಿದ್ದರು. ಅಶೋಕನು ಯಜ್ಞ–ಯಾಗಾದಿಗಳ ಹೆಸರಿನಲ್ಲಿ ಆಚರಣೆಯಾದ ಪ್ರಾಣಿಗಳ ಬಲಿದಾನವನ್ನು ನಿಷೇಧಿಸಿದ ಒಂದೇ ಸರಳವಾದ ಕಾರಣದಿಂದ ಪುರೋಹಿತಶಾಹಿತ್ವ ತುಳಯಲ್ಪಟ್ಟಿತು. ಅವರು ಕೇವಲ ರಾಜ್ಯಾಡಳಿತದ ಆಶ್ರಯವನ್ನು ಮಾತ್ರ ಕಳೆದುಕೊಳ್ಳಲಿಲ್ಲ. ಆದರೆ ಅವರು ತಮ್ಮ ಜೀವನದ ಮುಖ್ಯ ಆದಾಯ ಮೂಲವನ್ನು ಹೊಂದಿದ ಮತ್ತು ಒಮ್ಮೊಮ್ಮೆ ಬಹಳ ಗಟ್ಟಿಯಾದ ಶುಲ್ಕಕ್ಕಾಗಿ ಬಲಿದಾನ ಮಾಡುವ ಕೆಲಸವನ್ನು ಮುಖ್ಯವಾಗಿ ಹೊಂದಿದ ಉದ್ಯೋಗವನ್ನು ಕಳೆದುಕೊಂಡರು. ಆದ್ದರಿಂದ ಮೌರ್ಯರ ಸಾಮ್ರಾಜ್ಯವು ಬಾಳದ ಸುಮಾರು ನೂರಾ ನಲವತ್ತು ವರ್ಷಗಳ ಅವಧಿಯಲ್ಲಿ ಒಂದು ತುಳಿತಕ್ಕೊಳಗಾದ ಮತ್ತು ನಿರಾಶಾವಾದ ವರ್ಗವಾಗಿ ಪುರೋಹಿತ ಬ್ರಾಹ್ಮಣರು ಜೀವಿಸಿದರು. ಅವರ ನಿರಾಶೆವಾದ ಸ್ಥಿತಿಯು ಅವರಲ್ಲಿದ್ದ ಕೀಳರಿಮೆಗೆ ಕಾರಣವಾಗಿದ್ದಿರಬಹುದು. ಅವರು ಆದಿಶೂದ್ರರ ಕಡೆಗೆ ತಮ್ಮ ಪ್ರತಿಕಾರವನ್ನು ಉಳಿಸಿಕೊಂಡರು. ಅದು ಮನುಸ್ಮೃತಿಯ ಸಂಪಾದನೆಗೆ ದಾರಿಯಾಯಿತು. ಸಮಕಾಲಿ ದಿನದ ಜಾತಿವಾದಿಗಳ ವಿರೋಧಿ ಮನೋಭಾವವು ಮುಖ್ಯವಾಗಿ ಜೈನಧರ್ಮ ಮತ್ತು ಬುದ್ಧಧಮ್ಮದ ಅನುಯಾಯಿಗಳು ಅಂದರೆ ಆದಿಶೂದ್ರರ ಕಡೆಗೆ ಇರುವ ಅವರ ಹಳೆಯ ಕಾಲದ ಪ್ರತಿಕಾರದ ಕಾರಣದಿಂದಾಗಿರಲೂಬಹುದಾಗಿದೆ.

ಅಶೋಕನ ಅನಂತರ ಆಂತರಿಕ ಹೋರಾಟಗಳ ಕಾರಣದಿಂದ ಮೌರ್ಯರ ಸಾಮ್ರಾಜ್ಯವು ಕುಸಿಯಲು ಪ್ರಾರಂಭಿಸಿತು. ಬುದ್ಧಧಮ್ಮದ ಕಥೆಯೂ ಅದೇ ರೀತಿಯದಾಯಿತು. ಬುದ್ಧಧಮ್ಮವು ಪುರೋಹಿತಶಾಹಿಯ ವಿರುದ್ಧದ ಕ್ರಾಂತಿಯ ಸುಂಟರಗಾಳಿಯಾಗಿದ್ದರಿಂದ ಅದು ಜಾತಿ ಮತ್ತು ಸಮಾನತೆ ಇಲ್ಲದ ಸಮಾಜದ ರಚನೆಗೆ ಮಾರ್ಗವನ್ನು ಮಾಡಿತು. ಬುದ್ಧಧಮ್ಮದ ಸಮಾಜದ ನಾಡಭಾಷೆಯ ಸ್ವಭಾವವು ಅದರ ಇಳಿಮುಖಕ್ಕೆ ದಾರಿಯಾಯಿತು ಮತ್ತು ಅದರ ಪುರೋಹಿತಶಾಹಿಗೆ

ಅಂಟಿಕೊಂಡ ವೈರತ್ವ ಮತ್ತು ಅದರ ಪುನಃ ಸ್ಥಾಪನೆಗೆ ಮಾಡಿದ ಅವರ ಒಟ್ಟಾದ ಪ್ರಯತ್ನಗಳೂ ಕೂಡಾ ಇನ್ನುಳಿದ ಕಾರಣಗಳಾದವು. ಬುದ್ಧನ ಮರಣದ ಎರಡು ನೂರಾ ಹದಿನೆಂಟು ವರ್ಷಗಳ ಅನಂತರವೇ ಮೂರನೆಯ ಬುದ್ಧಧಮ್ಮದ ಅನುಯಾಯಿಗಳ ಆಲೋಚನಾ ಸಭೆಯು ನಡೆಯಿತು. ಅಂದರೆ ಕ್ರಿ.ಶ.ಪೂ. 246ರಲ್ಲಿ. ಆಲೋಚನಾ ಸಭೆಯ ಮುಖ್ಯ ಉದ್ದೇಶವು ಬುದ್ಧಧಮ್ಮದ ಗುಂಪಿನಲ್ಲಿ ಅದನ್ನು ನಾಶ ಮಾಡಲು ಅದರಲ್ಲಿ ನುಸುಳಿದ ಬೆಂಬಲಿಗರ ಮತ್ತು ಆಶ್ರಯದಾತರ ವೇಷದಲ್ಲಿ ಇರುವ ವೈರಿಗಳನ್ನು ಉಚ್ಚಾಟಿಸುವದಾಗಿತ್ತು.

ಬುದ್ಧಧಮ್ಮದ ನ್ಯಾಯ ಸಭೆಯ ನಿರ್ಣಯವು ಇಂಡೋ ಆರ್ಯನ್ನರನ್ನು ಕೆರಳಿಸಿತು. ಅದರ ಪರಿಣಾಮವಾಗಿ ದೇಶದಲ್ಲಿ ಎಲ್ಲ ಕಡೆಗೆ ಅಸಂಖ್ಯವಾದ ಹೊಡೆದಾಟಗಳು ಸಂಭವಿಸಿದವು. ಬುದ್ಧಧಮ್ಮದ ಸಹಿಷ್ಣುಗಳೆಂದು ತಿಳಿಯಲ್ಪಟ್ಟ ಕೆಲವು ನಿರ್ದಿಷ್ಟವಾದ ಅರಸರು ಮತ್ತು ಅದೇ ಸಮಯದಲ್ಲಿ ಹೃದಯದ ಅಂತರಾಳದಲ್ಲಿ ಬ್ರಾಹ್ಮಣೀಯತೆಯನ್ನು ಬೆಂಬಲಿಸಿದರು. ಏಕೆಂದರೆ, ಇಪ್ಪತ್ತನೇ ಶತಮಾನದ ರಾಜಕೀಯದ ಹಾಗೆ, ಅವರು ಅಸಂಖ್ಯವಾದ ಬುದ್ಧಧಮ್ಮದ ಭಿಕ್ಷುಗಳನ್ನು ಗಲ್ಲುಶಿಕ್ಷೆಗೆ ಕಳಿಸಿದರು. ಹೆಚ್ಚಿನ ಸ್ಥಳಗಳಲ್ಲಿ, ಬುದ್ಧಧಮ್ಮದ ಅನುಯಾಯಿಗಳು ಧಾರ್ಮಿಕ ಕೆಲಸಗಳ ಸ್ವಾತಂತ್ರ್ಯವನ್ನು ಕಳೆದುಕೊಂಡರು. ಅಶೋಕನ ಅವಧಿಯ ಅನಂತರ ಕೇವಲ ಪುರೋಹಿತಶಾಹಿಯ ಪ್ರಭಾವ ಮತ್ತು ಶಕ್ತಿಗಳು ಮಾತ್ರ ಹೆಚ್ಚಾಗಲಿಲ್ಲ. ಅದರೊಂದಿಗೆ ಅಶಾಂತಿ ಮತ್ತು ಹಿಂಸೆಗಳನ್ನು ಕೂಡ ಹೆಚ್ಚಿಸಿತು. ಬೌದ್ಧರಿಗೆ ಸಹಾಯ ಮತ್ತು ಬೆಂಬಲವನ್ನು ನೀಡಿದ ಮೌರ್ಯರ ಕೊನೆಯ ಅರಸರು ಇಂಡೋ ಆರ್ಯನ್ ಗುಂಪಿನ ಪ್ರತೀಕವಾರವನ್ನು ಪ್ರತಿರೋಧಿಸಲು ಅಸಮರ್ಥರಾಗಿದ್ದರು ಮತ್ತು ಬೌದ್ಧರು ಅರಸರ ಬೆಂಬಲವನ್ನು ಕಳೆದುಕೊಂಡಾಗ ಅವರ ಮಧ್ಯದಲ್ಲಿ ಆಂತರಿಕ ಹೋರಾಟಗಳು ಹೆಚ್ಚಲು ಪ್ರಾರಂಭಿಸಿದವು.

ಬುದ್ಧಧಮ್ಮದ ಇಳಿಮುಖಕ್ಕೆ ಕಾರಣವಾದ ಇನ್ನೂ ಅನೇಕ ವಾಸ್ತವ ಅಂಶಗಳು ಇದ್ದವು. ಆಳುವವರು ಮತ್ತು ಸಂಪತ್ತಿರುವ ವರ್ಗಗಳ ಬಹುಸಂಖ್ಯಾತರು ಕೆಟ್ಟ ಉದ್ದೇಶದಿಂದ ಈ ಬುದ್ಧಧಮ್ಮದಲ್ಲಿ ನುಗ್ಗಿದ್ದರು. ಅವರು ಅದರ ನಾಯಕತ್ವವನ್ನು ಹಿಡಿದು ಅದರ ಪ್ರಾಬಲ್ಯವನ್ನು ವಹಿಸಿಕೊಳ್ಳಲು ಬಯಸಿದ್ದರು. ಪ್ರಾರಂಭದಲ್ಲಿ ಹೊಸದಾಗಿ ಬಂದವರ ಪ್ರಭಾವಗಳ ಮೂಲಕ ಸ್ವಲ್ಪ ಪ್ರಚಾರವನ್ನು ಪಡೆಯಿತು (ಇದು ಕಾರ್ಮಿಕ ವರ್ಗಗಳ ಹೆಸರಿನಲ್ಲಿ ಮುಂದೆ ಬಂದ ಭಾರತದಲ್ಲಿಯ ರಾಜಕೀಯ ಪಕ್ಷಗಳ ಇತಿಹಾಸವನ್ನು ನೆನಪಿಸುತ್ತದೆ). ಆದರೆ ಒಟ್ಟು ಪರಿಣಾಮವು ಅದರ ಬೆಳವಣಿಗೆಗೆ ವಿರೋಧವಾಗಿತ್ತು.

ಅಶೋಕನ ಉತ್ತರಾಧಿಕಾರಿ ಅರಸರು ಆಡಳಿತದಲ್ಲಿ ಅಸಮರ್ಥರಾಗಿದ್ದರು. ಒಂದೇ ಸಮಯದಲ್ಲಿ ಮೌರ್ಯರ ಅರ್ಧ ಡಜನ್‌ದಷ್ಟು ರಾಜರು ಅವನ ಸಾಮ್ರಾಜ್ಯದ ಅನೇಕ ಭಾಗಗಳ ಮೇಲೆ ಆಳ್ವಿಕೆ ಮಾಡಿದರು. ಅಶೋಕನ ಮೊಮ್ಮಗನಾದ ದಶರಥನು (ರಾಮಾಯಣದವನಲ್ಲ) ಒರಂಬಾರ

ಗುಹೆಯನ್ನು ಆಜಿವಿಕಾಸನಿಗೆ ಕಾಣಿಕೆಯಾಗಿ ಕೊಟ್ಟನು. ಅದೇ ಸಮಯದಲ್ಲಿ ಉತ್ತರಾಧಿಕಾರಿ ಸಂಸರ್ಥಿಯು ಜೈನಧರ್ಮದ ನಂಬಿಕೆಯಲ್ಲಿ ಮರಣ ಹೊಂದಿದನು. ಮೌರ್ಯರ ಹೆಸರು, ತನ್ನ ರಾಜ ಮರ್ಯಾದೆಯ ಅಧಿಕಾರವು ಅದೃಶ್ಯವಾದ ಬಹಳ ದಿನಗಳ ಅನಂತರ ತನ್ನ ಘನತೆಯನ್ನು ಉಳಿಸಿಕೊಂಡಿತು. ಅಶೋಕನ ವಂಶದ ಕೊನೆಯವನಾದ ಮಗಧದ ಪೂರ್ಣವರ್ಮನ್ನನು ಸಸಾಂಕನ ನಾಶಕ್‌ರವಾದ ದಾಳಿಯ ಅನಂತರ ಬೋಧಿವೃಕ್ಷ ಮತ್ತು ಬುದ್ಧಧಮ್ಮದ (ಗಯಾದಲ್ಲಿರುವ) ಸ್ಥಾಪನೆಯನ್ನು ಪುನರುಜ್ಜೀವನ ಮಾಡಿದರು. ಖರಾವೇಲನೆಂಬ ಹೆಸರಿನ ಬರ್ಬರ (ಅನಾಗರೀಕನು) ಅಧಿಕಾರಕ್ಕೆ ಬಂದು ಕಳಿಂಗದಿಂದ ಅಶೋಕನ ವಿಜಯನನ್ನು ಮರಳಿಸಿದ ಹಾಗೆ ಹೃದಯ ಭಾಗದಲ್ಲಿ ಆಳವಾಗಿ ದಾಳಿ ಮಾಡಿದನು. ರಾಜಹತ್ಯೆ ಮತ್ತು ವೈದಿಕರ ಕ್ರಾಂತಿಗಳು ಆ ಸಮಯದ ಸಮಾಜವನ್ನು ಅಲ್ಲೋಲ ಕಲ್ಲೋಲ ಮಾಡಿದವು. ಪತಂಜಲಿಯ ವ್ಯಾಕರಣ ಮತ್ತು ಸಂಸ್ಕೃತದ ಸಾಹಿತ್ಯಗಳೂ ಕೂಡ ಪುಶ್ಯಮಿತ್ರ ಸುಂಗನ ಸಮಯಕ್ಕೆ ಸೇರುತ್ತವೆ. ಸುಂಗರು ತಾವು ಸಿಂಹಾಸನವನ್ನು ಏರಿದ ಮೇಲೆ ತಮಗೆ ವಂಶ ಪರಂಪರೆಯಿಂದ ಬಂದ 'ಹೊನ್ನಾಯಿ' ಎಂಬ ಬಿರುದನ್ನು ಉಳಿಸಿಕೊಂಡರು. ಕಾಸಿದಾನ 'ಮಾವಿಕ ಮತ್ತು ಅಗ್ನಿಮಿತ್ರ'ವು ಆತಮಾನಗಸ ಅನಂತರ ಉಜ್ಜೈನದ ವಿಜಯಿಯಾದ ಪುಶ್ಯಮಿತ್ರನ ಮಗನ ಪ್ರೇಮಕಥೆಯೊಂದಿಗೆ ಸಂಬಂಧಿಸುತ್ತದೆ. 'ಪುಂಗರ' ಬ್ರಾಹ್ಮಿಣೀಯ ಆಸ್ತಿಕೆಯು ಸ್ಥಾಪನೆಯಾಗಿ ಕೊನೆಯ ಸುಂಗನ ವೈದಿಕ ಮಂತ್ರಿ ಕವಾಯಾನನಿಂದ ಕೊನೆಯ ಶುಂಗನ ಕೊಲೆಯಾಗುವುದರೊಂದಿಗೆ ಮುಕ್ತಾಯವಾಗುತ್ತದೆ.

ಶಾತವಾಹನರ ಮೂಲವು ವೈದಿಕ ಪುರುಷ ಮತ್ತು ನಾಗಾ ಮಹಿಳೆಯರ ಮಿಲನದೊಂದಿಗೆ ಸಂಭವಿಸಿತ್ತು. ಪ್ರಾಕೃತ ಸಾಹಿತ್ಯವು ತನ್ನ ಪ್ರಥಮ ತಯಾರಿಕೆಯನ್ನು ಕ್ರಿ.ಶ. 3ನೇ ಶತಮಾನದಲ್ಲಿ ಬಾಡಿ ಹೋದ ಶಾತವಾಹನರ ಆಳ್ವಿಕೆಯ ಅಡಿಯಲ್ಲಿ ಅಭಿವೃದ್ಧಿ ಹೊಂದಿತು. ಕೃಷ್ಣಾ ನದಿಯ ದಕ್ಷಿಣದ ದಡದ ಮೇಲೆ ಇರುವ ನಾಗಾರ್ಜುನ ಕೊಂಡದಲ್ಲಿ ಮತ್ತು 'ಕಾಂಚಿ'ಯಲ್ಲಿ ಇರುವ ಮಹಾನ್ ಬುದ್ಧರ ಕೇಂದ್ರಗಳು ಕ್ರಿ.ಶ. 2ನೇ ಶತಮಾನಕ್ಕಿಂತ ಮೊದಲು ಸ್ಥಾಪನೆಯಾಗಿದ್ದವು. ಶಾತವಾಹನರು ಗುಪ್ತರ ಮಧ್ಯದಲ್ಲಿ (ಕ್ರಿ.ಶ. 4ನೇ ಶತಮಾನ) ಚಿಕ್ಕ ಸಂಶೋಧನೆಗಳ ಒಂದು ಅಂಕವಿರಾಮವು ಮತ್ತು ರಾಜ್ಯಾಧಿಕಾರವನ್ನು ಆಕ್ರಮಿಸಲು ಪ್ರಯತ್ನಿಸುತ್ತಿದ್ದ ಮೂಲನಿವಾಸಿಗಳು ಇದ್ದರು. ಇವರಲ್ಲಿ ಕೊನೆಯಲ್ಲಿ ಗಂಗಾನದಿಯ ಸಮತಟ್ಟಿನ ಅನೇಕ ನಾಗಾ ಜನರು ಇದ್ದರು.

ಒಂದನೇಯ ಚಂದ್ರಗುಪ್ತ (ಕ್ರಿ.ಶ.ಪೂ. 320–335)ನು ಲಿಚ್ಛಾವಿಯ ಕುಮಾರದೇವಿಯನ್ನು ಮದುವೆಯಾದನು. ಅವನು ಖೋಸಲ ಮತ್ತು ಮಗಧದ ಭಾಗಗಳ ಮೇಲೆ ಹಿಡಿತವನ್ನು ಹೊಂದಿದ್ದನು. ಕೊನೆಯ ಹೋರಾಟವು ಅವನ ಮಗನಾದ ಸಮುದ್ರಗುಪ್ತನ (ಕ್ರಿ.ಶ.ಪೂ. 335–375) ಅಡಿಯಲ್ಲಿ ಬಂದಿತು. ಎರಡನೇ ಚಂದ್ರಗುಪ್ತನು ವಿಕ್ರಮಾದಿತ್ಯ (ಕ್ರಿ.ಶ.ಪೂ. 379–414)ನಂತೆಯೇ ಠೀವಿಯನ್ನು ಮಾಡಿದನು ಮತ್ತು ನಾಗಾ ರಾಜಕುಮಾರಿ ಕುಬೇರ ನಾಗಾಗಳನ್ನು ಮದುವೆಯಾದನು. ಈ

ಸಮಯದಲ್ಲಿ ಫಾಹಿಯಾನನು ಭಾರತವನ್ನು ಸಂದರ್ಶಿಸಿದನು. ಎರಡನೇ ಚಂದ್ರಗುಪ್ತನು ತನ್ನ ರಾಜ್ಯವನ್ನು ಆಸ್ಸಾಂದವರೆಗೆ ಅಪಘಾನಿಸ್ತಾನ ಮಧ್ಯ ಏಶಿಯಾದ ಕಡೆಗೆ ಮತ್ತು ದಖ್ಖನ್ನಿನ ವರೆಗೆ ವಿಸ್ತರಿಸಿದನು. ಕ್ರಿಸ್ತನ ಅನಂತರದ ಅವಧಿಯಲ್ಲಿ ಶೂದ್ರರು ಅಥವಾ ನಾಗಾ ಜನರು ಎಂದು ಕರೆಯಲ್ಪಟ್ಟ ಜನರು ಅತ್ಯುತ್ತಮವಾದ ಸಂಸ್ಕೃತಿ ಮತ್ತು ನಾಗರೀಕತೆಗಳ ಸ್ಥಾಪಕರಾದರು. ಅವರು ಭಾರತದಲ್ಲಿ ಅತ್ಯಂತ ಮಂಚೂಣಿಯಲ್ಲಿದ್ದ ರಾಜ ಮರ್ಯಾದೆಯ ಕುಟುಂಬಗಳೊಂದಿಗೆ ಮದುವೆಯ ಸಂಬಂಧವನ್ನು ಹೊಂದಿದ್ದರು. ಅವರು ಅತ್ಯುತ್ತಮವಾದ ಸಂಸ್ಕೃತಿಯನ್ನು ಮಾತ್ರ ಹೊಂದಿರಲಿಲ್ಲ. ಅವರು ಭಾರತದ ಬೇರೆ-ಬೇರೆ ಭಾಗಗಳಲ್ಲಿ ಶ್ರೇಷ್ಠಾಧಿಕಾರವನ್ನು ಕೂಡ ಹೊಂದಿದ್ದರು. ಅವರ ವಾಸದ ಸ್ಥಿರವಾದ ಸ್ಥಳವು ಮಹಾರಾಷ್ಟ್ರವಾಗಿತ್ತು. ಕ್ರಿಶ್ಚಿಯನ್ ಯುಗದ ಪ್ರಾರಂಭದಲ್ಲಿ ಅವರು ಭಾರತ ಮತ್ತು ನೆರೆಹೊರೆಯ ರಾಜ್ಯಗಳ ಮೇಲೆ ಅಧಿಕಾರವನ್ನು ಹೊಂದಿದ್ದರು. ಸಾತವಾಹನರು ಶ್ರೀಕಾಕುಳದಲ್ಲಿ ರಾಜಧಾನಿ ಮಾಡಿಕೊಂಡು ಆಂಧ್ರವನ್ನು ಆಳಿದರು. ಅವರು ಮಾಳವ, ಹೈದರಾಬಾದ ಮತ್ತು ಮಹಾರಾಷ್ಟ್ರಗಳ ಮೇಲೆ ಆಕ್ರಮಣ ಮಾಡಿ ಸ್ವಾದೀನಪಡಿಸಿಕೊಂಡಿದ್ದರು. ಸಾತವಾಹನರ ಪ್ರಾಬಲ್ಯದ ಅವಧಿಯಲ್ಲಿ ಬುದ್ಧಧಮ್ಮವು ಉನ್ನತಿಯಲ್ಲಿತ್ತು. ಭೂಪಾಲದಲ್ಲಿ, ಸಾಂಚಿಯಲ್ಲಿ, ಆಂಧ್ರದಲ್ಲಿ ಅಮರಾವತಿ ಬುದ್ಧಸ್ಮಾರಕ ಸ್ತಂಭಗಳೆಂದು, ಪೇಶಾವರದಲ್ಲಿ ತಕ್ಷಶಿಲಾ ಎಂದು, ವಾರಣಾಸಿಯ ಸಾರಾನಾಥದಲ್ಲಿ ಮತ್ತು ಬುದ್ಧಧಮ್ಮದ ಇನ್ನೂ ನೂರಾರು ವಿಹಾರಗಳು ಸಾತವಾಹನರ ಸಮಯದಲ್ಲಿ ನಿರ್ಮಾಣವಾದವು. ಒಂದು ನಿರ್ದಿಷ್ಟವಾದ ರಾಜ್ಯದಲ್ಲಿ ನಿರ್ಮಿಸಿದ ವಿಹಾರಗಸ ಮೂಷವು ಅದನ್ನು 'ಬಿಹಾರ' ಎಂಬ ಸುಂದರವಾದ ಹೆಸರಿನಿಂದ ಅಲಂಕರಿಸಿವೆ. ನಾಗಾ ವಂಶಕ್ಕೆ ಸೇರಿದ ಜನರು ತಮ್ಮ ಹೆರುಗಸೊಂದಿಗೆ 'ನಾಗಾ' ಎಂಬ ಪದವನ್ನು ಉಪಯೋಗಿಸಿದ್ದರು.

3ನೇಯ ಮತ್ತು 4ನೇಯ ಶತಮಾನಗಳ ಅವಧಿಯಲ್ಲಿ ನಾಗಾಜನರು ಭಾರತದ ತುಂಬ ಎಲ್ಲ ಇದ್ದ ಹೆಚ್ಚಿನ ರಾಷ್ಟ್ರಗಳಲ್ಲಿ ಅಧಿಕಾರದಲ್ಲಿ ಇದ್ದರು. ನಾಗಾ ಜನರು 6ನೇ ಶತಮಾನದವರೆಗೆ ಸೌರಾಷ್ಟ್ರವನ್ನು ಆಳಿದರು ಎಂದು ತೋರಿಸುವ ಅಸಂಖ್ಯ ಪುರಾವೆಗಳು ಇರುತ್ತವೆ. ನಾಗಾ ಅಥವಾ ದ್ರಾವಿಡ ಎಂದು ಕರೆಯಲ್ಪಟ್ಟ ಜನರು ಕೇವಲ ದಕ್ಷಿಣ ಭಾರತದಲ್ಲಿ ಮಾತ್ರವಲ್ಲ. ಆದರೆ, ಉತ್ತರ ಭಾರತದ ಬೇರೆಬೇರೆ ಭಾಗಗಳಲ್ಲಿಯೂ ಕೂಡ ಆಳ್ವಿಕೆ ಮಾಡಿದರು. ಅವರ ಸಾಮ್ರಾಜ್ಯವು ವಾಯುವ್ಯ ದಿಕ್ಕಿನ ತಕ್ಷಶಿಲಾದಿಂದ ಈಶಾನ್ಯದ ಆಸ್ಸಾಂದ ವರೆಗೆ ಮತ್ತು ಸಿಲೋನ ದಲ್ಲಿಯೂ ಕೂಡ ವಿಸ್ತರಿಸಿತ್ತು. ತೇಲುವದರಲ್ಲಿ ಆಸಕ್ತಿ ಇದ್ದ ನಾಗಾ ಜನರು ಚೆರಾರೊಂದಿಗೂ ಕೂಡಿಕೊಂಡರು. ಪ್ರಾಚೀನ ಕಾಲದ ಈ ಜನರನ್ನು ದಕ್ಷಿಣದಲ್ಲಿ ಚೆರಾ ಜನರು, ಚೋಳರು ಅಥವಾ ಪಾಂಡ್ಯರು ಎಂದು ಕರೆಯುತ್ತರೆ. ಅವರು ಪುರಾಣಗಳಲ್ಲಿ ಅಸುರರು ಎಂಬ ಇನ್ನೊಂದು ಹೆಸರನ್ನು ಹೊಂದಿದ್ದರು. ದಕ್ಷಿಣ ಭಾರತದ ದ್ರಾವಿಡರು ಮತ್ತು ಉತ್ತರ ಭಾರತದ ನಾಗಾಜನರು ಅಥವಾ ಅಸುರರು ಇಬ್ಬರೂ ಒಂದೇ ರೀತಿಯ ಜನರಾಗಿದ್ದರು. ಕನೌಜ, ಹೈವಾ,

ಗಾಂಧಾರ, ಭೋಡಾ, ಸುದೇಶ, ಕುಂತಾಲಾ, ನೇಪಾಳ, ಸಾಹುಜವಾಟಿಕ, ಕೇಕಾಯ, ಪಾಂಡಿಯ ಇತ್ಯಾದಿಗಳು ಅವರ ಪ್ರಾಬಲ್ಯದ ಕೇಂದ್ರಗಳಾಗಿದ್ದವು.

ಹೀಗೆ, ಬುದ್ಧ ಪೂರ್ವ, ಬುದ್ಧನ ಕಾಲ ಮತ್ತು ಬುದ್ಧನ ಅನಂತರದ ಭಾರತೀಯ ಸಂದರ್ಭದ ಸಾಮಾಜಿಕ ಸ್ಥಿತಿಗತಿಯನ್ನು ಪ್ರಸ್ತುತ ಅಧ್ಯಯನದ ಮುಖೇನ ದಾಖಲಿಸುವಂತಹ ಪ್ರಯತ್ನವನ್ನು ತಳಸ್ಪರ್ಶಿಯಾಗಿ ಮಾಡಲಾಗಿದೆ ಎಂದು ಹೇಳಬಹುದು.

**ಪರಾಮರ್ಶಿಸಿದ ಪ್ರಧಾನ ಕೃತಿಗಳು**


1. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂ–3, 7, 2015
2. ಡಿ.ಡಿ.ಕೋಸಾಂಬಿ, ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ–ಚಾರಿತ್ರಿಕ ರೂಪುರೇಷೆ, ಬೆಂಗಳೂರು, 2011
3. ಮ. ನ. ಜವರಯ್ಯ, 'ಡಾ. ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ' ಸಿದ್ದಾರ್ಥ ಪ್ರಕಾಶನ, ಮೈಸೂರು, 1995
4. ಆರ್.ಎಸ್. ಶರ್ಮ., ಪ್ರಾಚೀನ ಭಾರತ, ನವಕರ್ನಾಟಕ ಪ್ರಕಾಶನ, 2010
5. D.C. Ahir (Ed.), *Ambedkar on Indian History, 1996*
6. THP Chentassares, Ambedkar on Indian History, Rawat Publication Delhi, 1986